**<u>ಸಾಕ್ಷಿಯನ್ನು ದಿನಾಂಕಃ 04-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ಶ್ರೀ. ಕೆ.ಜೆ.ಪಿ ವಕೀಲರವರಿಂದಃ</u>**

1. ನನಗೆ ದಾವಾ ಜಮೀನಿನ ಸರ್ವೆ ನಂಬರು ಮತ್ತು ವಿಸ್ತೀರ್ಣ ಗೊತ್ತಿರುವುದಿಲ್ಲ. ಈಗ ದಾವಾ ಅಸ್ತಿಯ ಪಹಣಿ ಮುತ್ತಾವಲ್ಲಿ ಅವರ ಹೆಸರಿನಲ್ಲಿ ಇರುತ್ತದೆ. ನನಗೆ ಸರ್ವೆ ನಂಬರು ಮತ್ತು ಡೋರ್ ನಂಬರು ಇವುಗಳ ನಡುವಿನ ವ್ಯತ್ಯಾಸ ಗೊತ್ತಿರುವುದಿಲ್ಲ. ದಾವಾ ಅಸ್ತಿಯಲ್ಲಿ ಸುನ್ನಿ ಜಮಾತಿ ಜಾಮಿಯ ಮಸೀದಿ ಇರುವುದಿಲ್ಲ ಅಂದರೆ ಸರಿಯಲ್ಲ. ಮಸೀದಿ ಇದೆ ಎಂದು ಸುಳ್ಳು ಸಾದನೆ ಮಾಡುತ್ತಿದ್ದೆನೆ ಅಂದರೆ ಸರಿಯಲ್ಲ.

2. ದಾವಾ ಅಸ್ತಿಯ ಕಂದಾಯ ದಾಖಲೆಗಳು 1928 ರ ಸೆಟಲ್ ಮೆಂಟ್ ರಿಜಿಸ್ಟರ್ ನಿಂದ ಹಿಡಿದು 1968 ರಿಂದ ಇಲ್ಲಿಯವರೆಗೂ ಕೂಡ ವಾದಿಗಳು ಹಾಗೂ ಅವರ ಪೂರ್ವಜರ ಹೆಸರಿನಲ್ಲಿ ಇರುವುದು ಮತ್ತು ಅಂದಿನಿಂದ ಇಲ್ಲಿಯವರೂ ವಾದಿಯರು ಹಾಗೂ ಪೂರ್ವಜರು ಸ್ವಾಧಿನ ಹೊಂದಿ ಸಾಗುವಳಿ ಮಾಡುತ್ತಿರುವರು ಅಂದರೆ ಸರಿಯಲ್ಲ. ಪ್ರತಿವಾದಿಗಳೆ ದಾವಾ ಅಸ್ತಿಯ ಮೇಲೆ ಹಕ್ಕು ಅಧಿಕಾರ ಹಿತಾಸಕ್ತಿ ಸ್ವಾಧೀನ ಇರುವುದಿಲ್ಲ ಅಂದರೆ ಸರಿಯಲ್ಲ.

3. ದಾವಾ ಅಸ್ತಿಯಲ್ಲಿ ಸುನ್ನಿ ಜಜಮಾತಿ ಜಾಮಿಯಾ ಮಸೀದಿ ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ಕಬಳಿಸಲು ಸದರಿ ಮಸೀದಿ ದಾವಾ ಅಸ್ತಿಯಲ್ಲಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

04-09-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ**